ಒಂದು ಯೋಜನೆಯಲ್ಲಿ ೬೦ ಪರ್ಸೆಂಟ್ ಬರುತ್ತದೆ, ಇದನ್ನು ಒದಗಿಸಬೇಕಾಗುತ್ತದೆ. ಸಾಧಾರಣ ೫.೯೬ ಕೋಟಿ ರೂಪಾಯಿಗಳ ಖರ್ಚು ಬರುತ್ತದೆ. ಈಗಾಗಲೇ ಆಡಳಿತ ಮಂಜೂರಾತಿ ಕೊಡುವುದಕ್ಕೆ ಪ್ಲಾನಿಂಗ್ ಡಿಪಾರ್ಟ್‌ಮೆಂಟ್‌ನಲ್ಲಿದೆ. ಎರಡು ಸಾರಿ ಪ್ಲಾನಿಂಗ್ ಡಿಪಾರ್ಟ್‌ಮೆಂಟ್ ಈ ವರ್ಷ ಈ ಯೋಜನೆಗೆ ಸರಿಯಾದ ಹಣ ಇಲ್ಲವೆಂದು ಹೇಳಿ ತಿರಸ್ಕಾರ ಮಾಡಿದ್ದರು, ಇದನ್ನು ಪುನಃ ತರಿಸಿ, ಆಡಳಿತ ಮಂಜೂರಾತಿಯನ್ನು ಕೊಡುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ. ಈ ೨೮ ಯೋಜನೆಗಳನ್ನು ನಾವು ಆಡಳಿತಾತ್ಮಕವಾಗಿ ಮಂಜೂರಾತಿ ಮಾಡಿ, ಅನುಷ್ಠಾನ ಮಾಡದೇ ಹೋದರೆ, ಕೇಂದ್ರ ಸರ್ಕಾರಕ್ಕೆ ಹೊಸ ಯೋಜನೆಗಳನ್ನು ಕಳುಹಿಸುವುದಕ್ಕಾಗುವುದಿಲ್ಲ. ಆದ್ದರಿಂದ ಹೊನ್ನಾವರ ತಾಲ್ಲೂಕಿನ ಪ್ರಶ್ನೆ ಉದ್ಭವವಾಗುವುದಿಲ್ಲ. ಈ ೨೮ ಯೋಜನೆಗಳೂ ಆದ ಮೇಲೆ, ಆದರಲ್ಲಿ ಭಟ್ಕಳವೂ ಸೇರುತ್ತದೆ, ಇದಾದ ಮೇಲೆ ಮಾಡಬಹುದು. ನಂತರ ಬಾಲವಾಡಿ ವರ್ಕರ್ಸ್ ಯಾರಿದ್ದಾರೆ ಅವರನ್ನು ಅಬ್ಸಾರ್ವ್ ಮಾಡುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಆರ್. ಎನ್. ನಾಯಕ್.—ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳಿದ್ದಾರೆ. ಅದು ಹೆಚ್ಚು ಕಡಿಮೆ ಯಾವಾಗ ಆಗಬಹುದು ಎಂಬುದಕ್ಕೆ ಅವಧಿಯನ್ನು ಹೇಳಿದರೆ ಸ್ವಲ್ಪ ಅನುಕೂಲವಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೇ, ಈಗ ಈ ಪ್ರಶ್ನೆ ಬಂದ ಮೇಲೆ ನಾನು ಅಧಿಕಾರಿಗಳ ಜೊತೆಯಲ್ಲಿ ಬ್ರೀಫಿಂಗ್ ತೆಗೆದುಕೊಳ್ಳುವಾಗ ಪ್ಲಾನಿಂಗ್ ಡಿಪಾರ್ಟ್‌ಮೆಂಟ್‌ನವರು ಇದನ್ನು ರಿಜೆಕ್ಟ್ ಮಾಡಿದ್ದಾರೆ ಎಂದು ಗೊತ್ತಾಯಿತಂ. In view of this, I will recall the file and find out. ಏತಕ್ಕೆ ಆಗಿದೆ, ಏನು ಕಾರಣ ಎಂದು ನಾನು ವಿಚಾರಿಸಿ ಕ್ರಮ ತೆಗೆದು ಕೊಳ್ಳಬೇಕಾಗುತ್ತದೆ. ಇಂತಿಷ್ಟೇ ಸಮಯದಲ್ಲಿ ಆಗುತ್ತದೆ ಎಂದು ಹೇಳುವುದಕ್ಕೆ ಆಗುವುದಿಲ್ಲ. I must go through the Planning Department file. ಆದಷ್ಟು ಬೇಗ ಪ್ಲಾನಿಂಗ್ ಡಿಪಾರ್ಟ್‌ಮೆಂಟ್‌ನಿಂದ ಫೈಲ್‌ನ್ನು ತರಿಸಿಕೊಂಡು ನೋಡುತ್ತೇನೆ. ಇದು ಕೇಂದ್ರ ಸರ್ಕಾರದ ಯೋಜನೆಯಾದರೂ ಕೂಡಾ out-go from the State Plan will be Rs. 5.96 crores per annum. ಇದರ ಬಗ್ಗೆ ವಿಚಾರ ಮಾಡಿ ಆದಷ್ಟು ಜಾಗ್ರತೆ ಆಡಳಿತಾತ್ಮಕ ಮಂಜೂರಾತಿ ಕೊಡುವ ಕಾರ್ಯಕ್ರಮ ಮಾಡುತೆ ನೆ.

ಶ್ರೀಮತಿ ದಮಯಂತಿ ಬೋರೇಗೌಡ.—ಕೇಂದ್ರ ಸರ್ಕಾರದಿಂದ ಮಂಜೂರಾಗಿರುವುದಕ್ಕೆ ಅಪ್ರೂವಲ್ ಕೊಡದೇ ಇದ್ದರೆ ಬಹಳ ದುರ್ದೈವವಾಗುತ್ತದೆ. ಇದಕ್ಕೆ ಅಡ್ಮಿನಿಸ್ಟ್ರೇಟೀವ್ ಸ್ಯಾಂಕ್ಷನ್ ತಾವು ಕೊಡಲೇ ಬೇಕು. ಇದರಲ್ಲಿ ಮದ್ದೂರು ಸೇರಿದೆಯೇ ಎಂಬುದನ್ನು ಸ್ವಲ್ಪ ನೋಡಿ ಹೇಳಿರಿ.

MR. SPEAKER.—Thank you.

ಶ್ರೀ ಎಂ. ವೀರಪ್ಪ ಮೊಯಿಲಿ.—ಈ ೨೮ರಲ್ಲಿ ಮದ್ದೂರೂ ಸೇರಿದೆ. ಬಹಳ ಸಂತೋಷದ ವಿಚಾರ. ಮಾನ್ಯ ಸದಸ್ಯೆಯರ ತ್ಯಾಗಮನೋಭಾವಕ್ಕೆ ಮೆಚ್ಚುಗೆ ಸೂಚಿಸಬೇಕು. ಅವರು ಶ್ರೀರಂಗಪಟ್ಟಣ ಕೇಳಲಿಲ್ಲ. ಮದ್ದೂರು ಬಗ್ಗೆ ಕೇಳಿದ್ದಾರೆ.

ಶ್ರೀಮತಿ ದಮಯಂತಿ ಬೋರೇಗೌಡ.—ಶ್ರೀರಂಗಪಟ್ಟಣ ಮೊದಲೇ ತೆಗೆದುಕೊಂಡಿದ್ದಾರೆ.

ಶ್ರೀಮತಿ ಮೋಟಮ್ಮ,—ಈ ಸ್ಕೀಮ್‌ಗಳನ್ನು ಎಲ್ಲೆಲ್ಲಿ ಯಾವ ಯಾವ ಜಿಲ್ಲೆಗೆ ಮಂಜೂರಾತಿ ಕೊಡುತ್ತೀರಿ.

ಶ್ರೀ ಎಂ. ವೀರಪ್ಪ ಮೊಯಿಲಿ.—Straight away I do not have that information. ಆಡಳಿತಾತ್ಮಕ ಮಂಜೂರಾತಿ ಬಗ್ಗೆ ಈಗಾಗಲೇ ಉತ್ತರ ಕೊಟ್ಟಿದ್ದೇನೆ.

೧೯೯೦-೯೧ನೇ ವರ್ಷದ ಆಯವ್ಯಯ ಅಂದಾಜಿನಲ್ಲಿ ಗಡಿ ಪ್ರದೇಶದ ಜಿಲ್ಲೆಗಳ ಅಭಿವೃದ್ಧಿಗಾಗಿ ಒದಗಿಸಿರುವ ಮೊತ್ತ

೫೮೭. ಶ್ರೀ ಮನೋಹರ್ ಐನಾಪುರ (ಬಳ್ಳಿಗಾವಿ).—ಮಾನ್ಯ ಹಣಕಾಸು ಮತ್ತು ಅಬ್ಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಗಡಿ ಪ್ರದೇಶದ ಜಿಲ್ಲೆಗಳ ಅಭಿವೃದ್ಧಿಗಾಗಿ ೧೯೯೦-೯೧ರ ಆಯವ್ಯಯ ಅಂದಾಜಿನಲ್ಲಿ ಹಣವನ್ನು ಒದಗಿಸಲಾಗಿದೆಯೇ ?

ಆ) ಹಾಗಿದ್ದಲ್ಲಿ, ಬಿಜಾಪುರ ಜಿಲ್ಲೆಗೆ ಎಷ್ಟು ಮೊತ್ತವನ್ನು ಒದಗಿಸಲಾಗಿದೆ ?

ಶ್ರೀ ಎಂ. ರಾಜಶೇಖರಮೂರ್ತಿ (ಹಣಕಾಸು ಮತ್ತು ಅಬ್ಕಾರಿ ಸಚಿವರು).—

ಅ) ಗಡಿ ಪ್ರದೇಶದ ಜಿಲ್ಲೆಗಳ ಅಭಿವೃದ್ಧಿಗಾಗಿ ರೂ ೫ ಕೋಟಿಗಳನ್ನು ೧೯೯೦–೯೧ರ ಆಯವ್ಯಯ ಅಂದಾಜಿನಲ್ಲಿ ಒದಗಿಸಲಾಗಿದೆ.

ಆ) ಈ ಮೊತ್ತದ ಜಿಲ್ಲಾವಾರು ಹಂಚಿಕೆಯನ್ನು ಇನ್ನೂ ನಿರ್ಧರಿಸಬೇಕಾಗಿದೆ.

ಶ್ರೀ ಮನೋಹರ ಐನಾಪುರ.—ಸಭಾಧ್ಯಕ್ಷರೇ, ಬಿಜಾಪುರ ಜಿಲ್ಲೆ ರಾಜ್ಯದಲ್ಲಿ ಅತಿ ದೊಡ್ಡ ಜಿಲ್ಲೆ. ಅಷ್ಟೇ ಅಲ್ಲ ಹಿಂದುಳಿದ ಜಿಲ್ಲೆ ಎಂದು ಹೆಸರುವಾಸಿಯಾಗಿದೆ. ಆದರೂ ಸರಕಾರ ಬಿಜಾಪುರ ಜಿಲ್ಲೆಗೆ ಮೊದಲಿನಿಂದಲೂ ಬಜೆಟ್‌ನಲ್ಲಿ ಅತೀ ಕಡಿಮೆ ಹಣ ಒದಗಿಸುತ್ತಿರುವುದರಿಂದ ಜಿಲ್ಲೆಯ ಅಭಿವೃದ್ಧಿ ಕನಸಿನ ಮಾತಾಗಿದೆ. ಅಷ್ಟೇ ಅಲ್ಲ, ಬಿಜಾಪುರ ಜಿಲ್ಲೆ ಐತಿಹಾಸಿಕ ಸ್ಥಳಗಳಿಂದ ತುಂಬಿದೆ. ಜಗತ್ ಪ್ರಸಿದ್ಧವಾದ ಗೋಲ್‌ಗುಂಬಜ್, ಬಾದಾಮಿ, ಐಹೊಳೆ, ಪಟ್ಟದಕಲ್ ಮುಂತಾದ ಸ್ಥಳಗಳನ್ನು ವೀಕ್ಷಿಸಲು ಸಾವಿರಾರು ಜನ ಪ್ರವಾಸಿಗರು ಪ್ರತಿವರ್ಷ ಮಹಾರಾಷ್ಟ್ರ ಭಾಗದಿಂದ ಸನ್ನ ಕ್ಷೇತ್ರವಾದ ಬಳ್ಳಾರಿ ಮೂಲಕ ಬರುತ್ತಾರೆ. ಅಲ್ಲಿನ ರಸ್ತೆ ಹಾಗೂ ಸೇತುವೆಗಳ ಪರಿಸ್ಥಿತಿ ನೋಡಿದರೆ ಗೊತ್ತಾಗುತ್ತದೆ ಇದು ಕರ್ನಾಟಕದ ರಸ್ತೆಗಳು ಎಂದು ಬಿಜಾಪುರ ಜಿಲ್ಲೆಯ ಗಡಿ ಭಾಗ ಯುಕೆ.ಪಿ. ಕಮ್ಯಾಂಡ್ ಏರಿಯಾದಲ್ಲಿ ಬರುತ್ತದೆ ಅಲ್ಲಿ ನೀರಾವರಿ ರಸ್ತೆಗೂ ಆಗಿಲ್ಲ. ಆದಕಾರಣ ಆದ್ಯತೆ ಮೇರೆಗೆ ಹಿಂದುಳಿದಿರುವಿಕೆಯನ್ನು ಅರಿತು ನಿರ್ದಿಷ್ಟವಾಗಿ ಎಷ್ಟು ಹಣ ಬಿಡುಗಡೆ ಮಾಡುತ್ತೀರಿ ಎಂಬುದನ್ನು ಹೇಳಬೇಕು.

ಶ್ರೀ ಎಂ. ರಾಜಶೇಖರ ಮೂರ್ತಿ.—ಅಧ್ಯಕ್ಷರೇ. ಬಿಜಾಪುರ ಜಿಲ್ಲೆ ಹಿಂದುಳಿದ ಪ್ರದೇಶ, ಅದು ಕ್ಷಾಮ ಪೀಡಿತ ಪ್ರದೇಶ ಎಂಬುದು ನಿಜವಾದ ವಿಚಾರ. ಈಗ ಬಾರ್ಡರ್ ಏರಿಯಾ ಡೆವೆಲಪ್‌ಮೆಂಟ್‌ಗೆ ಐದು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಅದರ ಹಂಚಿಕೆಯ ಕಾರ್ಯ ಪ್ರಾರಂಭವಾಗಿದೆ. ಪ್ಲಾನಿಂಗ್ ಡಿಪಾರ್ಟ್‌ಮೆಂಟ್‌ನವರು ತಮ್ಮ ಅಧಿಕಾರಿಗಳನ್ನು ಎಲ್ಲಾ ಜಿಲ್ಲೆಗೆ ಕಳುಹಿಸಿದ್ದಾರೆ ಕೆಲವು ಜಿಲ್ಲೆಗಳಿಂದ ಮಾಹಿತಿ ಬಂದಿದೆ. ಎಲ್ಲ ಜಿಲ್ಲೆಗಳಿಂದ ಮಾಹಿತಿ ಬಂದ ನಂತರ ಯಾವ ಯಾವ ಜಿಲ್ಲೆಗೆ ಎಷ್ಟೆಷ್ಟು ಕೊಡಬೇಕೆಂದು ಬರುತ್ತದೆ. ಇದುವರೆಗೆ ಜಿಲ್ಲಾವಾರು ಹಂಚಿಕೆಯಾಗಿಲ್ಲ. ಇದು ಜಿಲ್ಲಾವಾರು ಹಂಚಿಕೆಯಾಗದಿರುವಾಗ ಬಿಜಾಪುರಕ್ಕೆ ಅನ್ಯಾಯ ಆಯಿತು ಎಂದು ಹೇಳುವುದರಲ್ಲಿ ಅರ್ಥ ಇಲ್ಲ.

ಶ್ರೀ ಮನೋಹರ ಐನಾಪುರ.—ಹಣವನ್ನು ಬಿಡುಗಡೆ ಮಾಡುತ್ತೇವೆಂದು ಹೇಳಿದ್ದಾರೆ, ಈ ಹಣವನ್ನು ಯಾವ ಕೆಲಸಕಾರ್ಯಗಳಿಗೋಸ್ಕರ ಬಿಡುಗಡೆ ಮಾಡುತ್ತಾರೆ. ಇದು ಬಾರ್ಡರ್ ತಾಲ್ಲೂಕಿಗೆ ಸಂಬಂಧಪಟ್ಟ ಕೆಲಸಗಳಿಗೆ ಮಾತ್ರ ಉಪಯೋಗವಾಗುತ್ತದೆಯೋ ಅಥವಾ ಪೂರ್ತಿ ಜಿಲ್ಲೆಗೇ ಹಣವನ್ನು ಒದಗಿಸುತ್ತಾರೋ ಎಂಬುದನ್ನು ಮಾನ್ಯಸಚಿವರು ಹೇಳಬೇಕು.

ಶ್ರೀ ಎಂ. ರಾಜಶೇಖರ ಮೂರ್ತಿ.—ಇದು ಬಾರ್ಡರ್ ಏರಿಯಾ ಡೆವೆಲಪ್‌ಮೆಂಟ್‌ಗೆ ಮಾತ್ರ ಅನ್ವಯಿಸುತ್ತದೆ. ಇಂಟೀರಿಯರ್ ಪ್ರದೇಶಕ್ಕೆ ಅನ್ವಯಿಸುವುದಿಲ್ಲ.

ಅಧ್ಯಕ್ಷರು.—ಶ್ರೀಮತಿ ವೋಟಮ್ಮನವರೇ ನಿಮ್ಮ ಸಚಿವರು ಟೈವಲ್ ಬೇಕೆಂದು ಕೇಳಿದ್ದಾರೆ.

ಶ್ರೀಮತಿ ವೋಟಮ್ಮ.—ಮಾನ್ಯ ಅಧ್ಯಕ್ಷರೇ, ಇದು ಬಹಳ ಪ್ರಮುಖವಾದ ಪ್ರಶ್ನೆಯಾದುದರಿಂದ ಇದನ್ನು ಪುನಃ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು.—ಆಗಬಹುದು.

ಹರಿಜನ–ಗಿರಿಜನ ಬಸ್ತಿಗಳಿಗೆ ವಿದ್ಯುಚ್ಛಕ್ತಿ

೧೧೬೮. ಶ್ರೀ ಜೆ. ರಾಜಗೌಡ (ಹನೂರು).—ಮಾನ್ಯ ಕೈಗಾರಿಕೆ, ಇಂಧನ ಮತ್ತು ಪಕ್ಷ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಕೊಳ್ಳೇಗಾಲ ತಾಲ್ಲೂಕಿನಲ್ಲಿ ಇರುವ ಹರಿಜನ ಹಾಗೂ ಗಿರಿಜನರ ಬಸ್ತಿಗಳೆಷ್ಟು ?

ಆ) ಇವುಗಳ ಪೈಕಿ ಎಷ್ಟು ಬಸ್ತಿಗೆಳಿಗೆ ವಿದ್ಯುತ್ ದೀಪದ ಸೌಲಭ್ಯ ಒದಗಿಸಿದೆ ?

ಇ) ೧೯೯೦–೯೧ರಲ್ಲಿ ಎಷ್ಟು ಗಿರಿಜನ ಕಾಲೋನಿಗಳಿಗೆ ಹಾಗೂ ಹರಿಜನ ಬಸ್ತಿಗಳಿಗೆ ವಿದ್ಯುತ್ ದೀಪಗಳನ್ನು ಒದಗಿಸುವ ಗುರಿ ಇದೆ ?